ಚಿಕಿತ್ಸಾ ಶಿಬಿರ ■ ಪ್ರಮಾಣಿತ ಕೀಟನಾಶಕ-ಸಾವಯವ ಕೃಷಿಗೆ ಒತ್ತು ನೀಡಿ

ಕೀಟನಾಶಕ ಬಳಕೆಯಿಂದ ರೈತರಿಗೂ ಹಾನಿ: ಭಕ್ಕಣ್ಣನವರ

ಕಲಬುರಗಿ: ಈಂದ ತಾಲೂಕು ತೆಲ್ಲೂರು ಗ್ರಾಮದಲ್ಲಿ ಆಯೋಜಿಸಲಾಗಿದ್ದ ರೈತರ ಆರೋಗ್ಯ ತಪಾಸಣಾ ಶಿಬಿರವನ್ನು ಡಾ. ಶಂಕರ ಎಂ. ಭಕ್ಕಣ್ಣನವರ ಉದ್ಘಾಟಿಸಿದರು.

ಕಲಬುರಗಿ ಸಮೀಪ ಕೃಷಿ ಕ್ಷೇತ್ರದಲ್ಲಿ ದುಡಿಯುವ ರೈತರು ವಿವಿಧ ಕೀಟನಾಶಕ ಬಳಕೆಯನ್ನಿರಿ ಬಯಸುತ್ತಾರೆ. ಹಾಗಾಗಿ ಅವರಿಗೂ ಆರೋಗ್ಯ ತಪಾಸಣೆ ಸಂಘಟಿಸಿದೆ ಎಂದು ಮಾಜಾಲ ಕನ್ನಡಿಗಾ ಮಹೇಶ್ ಕಾಲೇಜು ಪ್ರಾಚಾರ್ಯ ಶಂಕರ ಎಂ. ಭಕ್ಕಣ್ಣನವರ ಹೇಳಿದರು.

ಈಂದ ತಾಲೂಕು ತೆಲ್ಲೂರು ಗ್ರಾಮದಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗ, ರಾಯಚೂರು ಕೃಷಿ ವಿಶ್ವವಿದ್ಯಾಲಯ, ಕಲಬುರಗಿ ಕೃಷಿ ವಿಜ್ಞಾನ ಕೇಂದ್ರ, ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಡಾ.ಎ. ಬೇಂಡೇಕರ್ ಮಹಾವಿದ್ಯಾಲಯ ರೈತರಿಗೆ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ರೈತರ ದೇಹದಲ್ಲಿನ ಇತರ ಭಾಗಗಳ ಮೇಲೆ ಕೀಟನಾಶಕ ರಾಸಾಯನಿಕದ ಅಣ್ಣ ಪರಿಣಾಮಗಳ ಕುರಿತು ತಪಾಸಣೆ ಮಾಡಿ ಅವರಿಗೆ ಸೂಕ್ತ ಪರಿಹಾರೋಪಾಯ ಸೂಚಿಸಲಾಗುವುದು ಎಂದು ಹೇಳಿದರು.

ಕೃಷಿ ವಿಶ್ವವಿದ್ಯಾಲಯದ ಕಾರ್ಯಕ್ರಮ ಸಂಯೋಜಕ ಡಾ. ರಾಜು ಪಿ. ಕೆಗ್ಗಲ್ ಮಾತನಾಡಿ, ಕೊಳ್ಳು ಮಾರಿದಲ್ಲಿ ಮಳೆ-ಬೆಳೆಗಳ ಮಧ್ಯೆ ಕೆಲಸ ಮಾಡುವ ಇದ್ದರೂ ಅತಿಯಾದ ರಾಸಾಯನಿಕ ಕೀಟನಾಶಕ ಬಳಕೆ ಸಲ್ಲದೆಂದು. ಶಿಬಿರದಲ್ಲಿ ಹಾಗೂ ಪ್ರಮಾಣಿತ ಕೀಟನಾಶಕ ಹಾಗೂ ಸಾವಯವ ಕೃಷಿಗೆ ಒತ್ತು ನೀಡಬೇಕು. ಇದರಿಂದ ಪರಿಸರವನ್ನೂ, ರೈತರು ಕುಟುಂಬ ಹಾಗೂ ಸಮಾಜದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಕೃಷಿ ವಿಷಯ ಭೂಮಿ ಮಾತನಾಡಿದರು. ಸಂಯೋಜಕರಾದ ಡಾ. ಭೂಷಣ ಗುಮಟೆ, ಡಾ. ಎ.ಮಾಲಿಕ್, ಡಾ. ಪ್ರಗತಿ, ಅಧಿಕಾರಿ ಹಾಗೂ ಹಾಗಾಗಾ ಬೇಕಾದಂತೆ ರೈತರನ್ನು ವಿವಿಧ ಕೊಠಡಿಗೆ ಒಳಪಡಿಸಿದರು.

ಒಟ್ಟು 135 ಜನ ರೈತರು ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಂಡರು.

ಸಮಾರೋಪ ಕಾರ್ಯಕ್ರಮದ ಡಾ. ಇಮಿಲ್ ಅಹಮದ್ ಸ್ವಾಗತಿಸಿದರು. ಧಾನ್ ಬೇಂಡೇಕರ್ ಅಧಿಕಾರಿ ಪರಿಮಾಣದ ಕಾರ್ಯಕ್ರಮ ನಿರೂಪಿಸಿದರು. ಕೃಷಿ ವಿಶ್ವವಿದ್ಯಾಲಯದ ಕ್ಷೇತ್ರ ಸಹಾಯಕ ಮಲ್ಲಿಕಾರ್ಜುನ ಪಾಟೀಲ, ಶೈಲಜ ವಂದಿಸಿದರು.

'ರೈತರ ಆರೋಗ್ಯ ತಪಾಸಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಹಾವೇರಿ: 'ಹೊಲಗಳಿಗೆ ಸಸ್ಯ ಕೀಟ ನಾಶಕ ಬಳಕೆ, ರಸಗೊಬ್ಬರ ಹಾಕುವ ಪರಿಣಾಮ ರೈತರ ರಕ್ತದಲ್ಲಿ ಇದರ ಅಂಶಗಳು ಸೇರಿಕೊಳ್ಳುವ ಅಪಾಯವಿದೆ. ಆದ್ದರಿಂದ ಮಣ್ಣು ಹಾಗೂ ರಕ್ತದ ತಪಾಸಣೆ ಮತ್ತು ರಕ್ತದ ಒತ್ತಡ ಹಾಗೂ ಸಕ್ಕರೆ ಪ್ರಮಾಣ ತಪಾಸಣೆ ಅಗತ್ಯ' ಎಂದು ಮಾಣೆಕಾಂದ ಕೃಷಿ ವೈದ್ಯಾಧಿಕಾರಿ ಡಾ.ಶಂಕರ ಬಕ್ಕಣ್ಣನವರ್ ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗದ 'ರೈತರ ಆದಾಯ ಹಾಗೂ ಕಲ್ಯಾಣ ಆಧಿಸ್ಥಿತಿ ಯೋಜನೆ' ಅಡಿಯಲ್ಲಿ ಹಾನಗಲ್ಲು ಕೃಷಿ ವಿಜ್ಞಾನ ಕೇಂದ್ರ ಹಾಗೂ ಬ್ಯಾಡಗಿ ತಾಲ್ಲೂಕು ಆರೋಗ್ಯ ಅಧಿಕಾರಿ ಕಚೇರಿ ಸಹಯೋಗದಲ್ಲಿ ಈಚೆಗೆ ಬ್ಯಾಡಗಿ ತಾಲ್ಲೂಕಿನ ಮಿರ್ಜಿ ದೀಪಾಪುರ ಗ್ರಾಮದಲ್ಲಿ ನಡೆದ 'ರೈತರ ಆರೋಗ್ಯ ತಪಾಸಣೆ ಶಿಬಿರ'ದಲ್ಲಿ ಅವರು ಮಾತನಾಡಿದರು.

'ರೈತರು ಆತ್ಮಹತ್ಯೆಯಂತಹ ಆಲೋಚನೆ ಮಾಡಬಾರದು. ಆತ್ಮಸ್ಥೈರ್ಯ ಬೆಳೆಸಿಕೊಂಡು ಬದುಕಿನಲ್ಲಿ ಮುನ್ನಡೆಯಬೇಕು' ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪಿ. ಆರ್. ರಮಾಣಿ ಹೇಳಿದರು.

ಕಾರ್ಯಾಗಾರದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ಡಾ. ವರೋಜಿನಿ ಪಿ ಕರಕಣ್ಣನವರ ಮಾತನಾಡಿ, 'ರೈತರು ಬೆಳೆ, ಹೊಲದ ಜತೆಗೆ ತಮ್ಮ ಆರೋಗ್ಯ ಹಾಗೂ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಬೇಕು. ಕುಟುಂಬಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದರು.

'ಮಣ್ಣಿನ ಆರೋಗ್ಯ ಕಾಪಿಟ್ಟುಕೊಳ್ಳುವ ರೈತರಿಗೆ 'ಮಣ್ಣು ಆರೋಗ್ಯ ಕಾರ್ಡ್' ವಿತರಿಸಲಾಗುವುದು. ರೈತರಿಗೆ ಹಾಗೂ ರೈತ ಮಹಿಳೆಯರಿಗೆ ಆರೋಗ್ಯ ಚೀಟಿ ವಿತರಿಸಲಾಗುವುದು' ಎಂದು ಕೃಷಿ ವಿಜ್ಞಾನಿ ಡಾ.ಅಶೋಕ ಪಿ. ಹೇಳಿದರು.

ಸಹಾಯಕ ಕೃಷಿ ಅಧಿಕಾರಿ ಕೇಶವ, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ರತ್ನಾ ಗುತ್ತಲ್ ಮೇಗಳಮನಿ, ಸದಸ್ಯ ಸಿದ್ದಲಿಂಗಪ್ಪ ಗುರೇಮಠ, ಕೇಂದ್ರದ ಗೃಹ ವಿಜ್ಞಾನಿ ವಿಜಯಾ [illegible]

ಬ್ಯಾಡಗಿ ತಾಲ್ಲೂಕಿನ ಮಿರ್ಜಿ ದೀಪಾಪುರ ಗ್ರಾಮದಲ್ಲಿ ಈಚೆಗೆ ರೈತರ ಆರೋಗ್ಯ ತಪಾಸಣೆ ಶಿಬಿರ ನಡೆಯಿತು

ಧಾರ್ಮಿಕ ತರಬೇತಿ

MANIPAL UNIVERSITY
"ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಯೋಜನೆ
04-08-2017 10:40